ಅವರ ಮನೆಯಲ್ಲೇ ಸಂದರ್ಶನ ಶುರುವಾಯಿತು.

ತಮ್ಮ ತಂದೆ ಪಂ.ತಾರಾನಾಥರ ಬಹುಮುಖ ಪ್ರತಿಭೆಯ ಬಗ್ಗೆ ಮಾತಾಡ್ತಾ 'ಒಂದ್ರೀತಿಯಲ್ಲಿ ಅವರ ಜೀವನ ವ್ಯರ್ಥ. ಅಂಥ ದೊಡ್ಡ ವ್ಯಕ್ತಿಯ ಜೀವನ ಸಂಪೂರ್ಣ ವ್ಯರ್ಥವೇನಲ್ಲವಾದರೂ ಅವರು ತಮಗೆ ತಾವು ಹೆಚ್ಚು ಆಸ್ಪದ ಕೊಟ್ಟುಕೊಳ್ಳಬೇಕಾಗಿತ್ತು ಅಂತ ನನಗನಿಸ್ತದೆ. ಒಮ್ಮೆಗೆ ಹತ್ತಾರು ಕ್ಷೇತ್ರಗಳಲ್ಲಿ ನಿರತರಾಗುವ ಪ್ರಯತ್ನ ಮಾಡಿದ್ದರಿಂದ ಅವುಗಳಲ್ಲಿ ಯಾವೊಂದರಲ್ಲೂ ಹೆಚ್ಚು ಕೆಲಸ ಮಾಡಿ ಪ್ರಭುತ್ವ ಸಂಪಾದಿಸಲು ಅವರಿಂದ ಆಗಲಿಲ್ಲ' ಎಂದರು. 'ಐತಿಹಾಸಿಕ ಕಾರಣಗಳಿಗಾಗಿ ನಮ್ಮ ಎಷ್ಟೋ ದ್ರಾವಿಡ ಭಾಷೆಗಳು ಸಂಸ್ಕೃತ ಭಾಷೆಯ ಎದುರಿನಲ್ಲಿ ಕುಗ್ಗಿಬಿಟ್ಟವೆ. ಎಷ್ಟರಮಟ್ಟಿಗೆ ಎಂದರೆ ನಮಗೆ ನಮ್ಮ ಭಾಷೆಯ ಬಗ್ಗೆ ಹೆಮ್ಮೆಯಿಲ್ಲ. ನಾಚಿಕೆಯಿದೆ' ಎಂದರು.

ಐತಿಹಾಸಿಕ ಕೃತಿಯೊಂದರ ವಿಮರ್ಶಾ ಮಾನದಂಡ ಏನಾಗಿರಬೇಕೆಂಬ ಪ್ರಶ್ನೆಗೆ ಉತ್ತರಿಸುತ್ತ 'ನೀವು ಯಾಕೆ ಕೇಳ್ತೀರಿ ಅನ್ನೂದು ಕೂಡ ಗೊತ್ತು. ನಾನು ಆ ಕೃತಿಯನ್ನು ಓದಿಲ್ಲ. ಒಬ್ಬ ಬರಹಗಾರ ಇತಿಹಾಸವನ್ನು ಮುಟ್ಟಿದರೆ ಅಲ್ಲಿ ಖಚಿತ್ಯವನ್ನು ಹುಡುಕಬೇಕೇ ಹೊರತು, ಅನುಕೂಲಸಿಂಧುವಾಗಿ ನೋಡಬಾರದು' ಎಂದರು. ಏನನ್ನಿಸಿತೋ ತಕ್ಷಣ ಅನಂತಮೂರ್ತಿಯವರಿಗೆ ಫೋನಾಯಿಸಿದರು. ಅವರಾಗ ಪುಣೆಗೆ ಹೊರಟಿದ್ದರು. ಸಂದರ್ಶಕರೊಬ್ಬರು ಹೀಗೆ ಪ್ರಶ್ನೆ ಕೇಳಿದ್ದಕ್ಕೆ ಹೀಗ್ಹೀಗೆ ಉತ್ತರಿಸಿದೆ ಎಂದು ಹೇಳಿಕೊಂಡರು.

ಮತ್ತೆ ಸಂದರ್ಶನ ಮುಂದುವರಿಯಿತು. 'ನಮ್ಮ ಸಂಗೀತ ಬಹಳ ದೊಡ್ಡದು. ಅದಕ್ಕೆ ನಾವೇನು ಕೊಡಬೇಕೋ ಕೊಡಲಿಲ್ಲ. ಅನುಕೂಲಸಿಂಧು ಹೊಟ್ಟೆಬಾಕರು ನಾವು. ಸಂಗೀತದ ಕುರಿತಾದ ನಮ್ಮ ಭಕ್ತಿ ಪಾಶ್ಚಾತ್ಯರಂತೆ ಎಕೋಯಿಸ್ಟಿಕ್ ರಿಸರ್ಚ್‌ಗೆ ಕಾರಣವಾಗದೆ; ಸೋವಿಯಾಗಿ ಸಿಗುವ ಸೇವಂತಿಗೆ ಹೂವನ್ನು ಸುರಿದು ಶುಕ್ರವಾರಕ್ಕೊಮ್ಮೆ ಪೂಜೆ ಮಾಡುವುದರಲ್ಲಿ ವ್ಯಕ್ತವಾಗುತ್ತಿದೆ' ಎಂದು ವಿಷಾದಿಸಿದರು. ಅವರೊಂದಿಗೆ ಫೋಟೊ ತೆಗೆಸಿಕೊಳ್ಳಲು ಧೈರ್ಯವೇ ಸಾಲಲಿಲ್ಲ.

3

ರಾಯಚೂರು ತಾಲ್ಲೂಕು ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷನಾಗಿದ್ದಾಗ ಸಮ್ಮೇಳನದ ಉದ್ಘಾಟನೆಗೆ ಚಂಪಾ ಅವರನ್ನು ಕರೆಸಿದ್ದೆ. ಸಮಾರೋಪಕ್ಕೆ ರಾಜೀವ ತಾರಾನಾಥರನ್ನು ಕೇಳಿದಾಗ, ಸಂಗೀತ ಕಚೇರಿಗಾದರೆ ಬರುವೆನೆಂದರು. ಇದಕ್ಕಾಗಿ ಮನೆಗೆ ಹೋಗಿದ್ದಾಗ ಸತ್ಯನಾರಾಯಣರಾವ್ ಅಣತಿಯವರು ಬಂದಿದ್ದರು. ಅವರ ಮಗ ಆಗ ರಾಜೀವ ತಾರಾನಾಥರಲ್ಲಿ ಸರೋದ್ ಕಲಿಯುತ್ತಿದ್ದರೆಂದು ನೆನಪು. ಸಂಭಾವನೆ ಮತ್ತು ಸಭಿಕರ ದೃಷ್ಟಿಯಿಂದ ಹೆದರಿ ನಾನೇ ಹಿಂಜರಿದೆ.

ನಂತರ 'ಪಂ. ತಾರಾನಾಥ ಶಿಕ್ಷಣ ಸಂಸ್ಥೆ'ಯ ಶತಮಾನೋತ್ಸವ ಸಮಾರಂಭದ ನೆನಪಿಗೆ ಪಂ. ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಯೋಜಿತವಾಗಿದ್ದ ಕಾರ್ಯಕ್ರಮದಲ್ಲಿ ಅವರ ನುಡಿಸಾಣಿಕೆಯನ್ನು ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಅವರ ಬಹುಪಾಲು ಸಂಬಂಧಿಕರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸನ್ಮಾನದ ನಂತರ ಮಾತಾಡುತ್ತ ಹಲವಾರು ಸಾಮಾಜಿಕ ವಿದ್ಯಮಾನಗಳಿಗೆ ಅವರಿಗೇ ವಿಶಿಷ್ಟವಾದ ಕಟುವಾದ ಸ್ಪಷ್ಟೋಕ್ತಿಗಳಲ್ಲಿ ಪ್ರತಿಕ್ರಿಯೆ ನೀಡಿದರು. ಕೋಮುವಾದೀ ಧ್ರುವೀಕರಣವನ್ನು ವಿರೋಧಿಸಿ, ಅದರ ಅಪಾಯಗಳ ಬಗ್ಗೆ ತಿಳಿಸಿದರು. ಮುಂದಿನ ಸಾಲಿನಲ್ಲಿ ಕುಳಿತಿದ್ದ ಹಿರಿತಲೆಗಳೊಂದಿಗೆ ವೇದಿಕೆ ಮೇಲಿಂದಲೇ ಉರ್ದುವಿನಲ್ಲಿ ಮಾತಾಡಿದರು. ನಗರ ನಕ್ಸಲರೆಂದು ಹಣೆಪಟ್ಟಿ ಕಟ್ಟಿ ಬುದ್ಧಿಜೀವಿಗಳನ್ನು ಬಂಧಿಸುವುದನ್ನು ವಿರೋಧಿಸಿ, 'ಹಾಗಾದರೆ ನಾವೆಲ್ಲರೂ ನಗರ ನಕ್ಸಲರೇ ಅಲ್ಲವೆ?' ಎಂದರು. 'ಈ ದೇಹವನ್ನೀಗ ಮುನ್ನಡೆಸ್ತಿರೋದು ಉತ್ಸಾಹ, ಚೈತನ್ಯಗಳೇನಲ್ಲ; ಆಂಟಿಬಯಾಟಿಕ್ಕುಗಳು!' ಅಂತ ತುಸು ತಮಾಷೆಯ ದನಿಯಲ್ಲಿ ನುಡಿದರು. ಪಕ್ಕದಲ್ಲಿದ್ದ ಶಿಷ್ಯರನ್ನು, ತಬಲಾ ಸಾಥ್ ನೀಡುತ್ತಿದ್ದ ಪುಟ್ಟ ಪೋರನನ್ನು ಹುರಿದುಂಬಿಸುವಾಗ ಮಾತ್ರ ಅವರ ತುಟಿಗಳ ಮೇಲೆ ಮಾತೃವಾತ್ಸಲ್ಯದ ನಗು ಲಾಸ್ಯವಾಡುತ್ತಿತ್ತು.

ಭಾಷೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ವಿದ್ಯಮಾನಗಳ ಬಗ್ಗೆ ಇದಮಿತ್ಥಂ ಎಂಬಂತೆ ಖಚಿತವಾಗಿ ಮಾತಾಡಬಲ್ಲ, ಕಿರಿಯರ ಮಾತು ಒತ್ತಟ್ಟಿಗಿರಲಿ ಓರಗೆಯವರನ್ನೂ ಪ್ರಭಾವಿಸಬಲ್ಲಂಥ ವಿದ್ವತ್ ವ್ಯಕ್ತಿತ್ವವುಳ್ಳ ಒಂದು ಕೊಂಡಿ ಕಳಚಿದ ಭಾವ ಆವರಿಸಿದೆಯೀಗ.

●